## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| (1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1277 |
| (2) | ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| (3) | ಉತ್ತರಿಸಬೇಕಾದ ದಿನಾಂಕ | 29.12.2022 |
| (4) | ಉತ್ತರಿಸುವ ಸಚಿವರು | ಮಾನ್ಯ ಕಾನೂನು ಸಚಿವರು |

| ಕ್ರ ಸಂ | ಪ್ರಶ್ನೆ | ಸಂಖ್ಯೆ |
|---|---|---|
| ಅ) | ರಾಜ್ಯದಲ್ಲಿ ವಿವಿಧ ಹಂತದ ನ್ಯಾಯಾಲಯಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಜಿಲ್ಲಾ ನ್ಯಾಯಾಂಗದಲ್ಲಿ ಒಟ್ಟು 6279 ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ನ್ಯಾಯಾಲಯಗಳಲ್ಲಿನ ದೈನಂದಿನ ಕಲಾಪಗಳಿಗೆ ಹಾಗೂ ಕಾರ್ಯಗಳಿಗೆ ಸಿಬ್ಬಂದಿಗಳ ಅವಶ್ಯಕತೆ ತುಂಬಾ ಇರುವುದರಿಂದ ಸರ್ಕಾರ ಈ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು? | FNJPCಯ ಶಿಫಾರಸಿನ ಪ್ರಕಾರ, ಸರ್ಕಾರಿ ಆದೇಶ ಸಂಖ್ಯೆ: ಲಾ 172 ಎಲ್ಎಸಿ 2009 ದಿನಾಂಕ 19.9.2009ರಲ್ಲಿ 517 ಶಿರಸ್ತೇದಾರರ ಹುದ್ದೆಗಳನ್ನು ಹಿರಿಯ ಶಿರಸ್ತೇದಾರರು ಗ್ರೇಡ್/ಬೆಂಚ್ ಕ್ಲರ್ಕ್ ಗ್ರೇಡ್-1 ಹುದ್ದೆಗೆ ಮತ್ತು 132 ಶೀಘ್ರಲಿಪಿಗಾರರ ಹುದ್ದೆಗಳನ್ನು ಶೀಘ್ರಲಿಪಿಗಾರರು ಗ್ರೇಡ್-IIಯಿಂದ ಗ್ರೇಡ್-I ಅಂದರೆ ಗ್ರೂಪ್ 'ಬಿ' ಹುದ್ದೆಗೆ ಉನ್ನತೀಕರಿಸಲಾಗಿದೆ ಹಾಗೂ ಇದು ಹೊಸ ಹುದ್ದೆಯಾಗಿರುವುದರಿಂದ, ಮುಂಬಡ್ತಿ ನೀಡುವ ಪ್ರಕ್ರಿಯೆಯು ಜಿಲ್ಲಾ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಲ್ಲಿ ಪ್ರಗತಿಯಲ್ಲಿದೆ.<br><br>ಸಂಬಂಧಪಟ್ಟ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರುಗಳು ತಮ್ಮ ಘಟಕದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಿರುತ್ತಾರೆ. ಒಟ್ಟಾರೆ 1552 ಹುದ್ದೆಗಳ ಭರ್ತಿ ಪ್ರಕ್ರಿಯೆಯು ಪ್ರಕ್ರಿಯೆಯಲ್ಲಿದೆ.<br><br>ಇದಲ್ಲದೆ, ದಿನಾಂಕ:18.11.2022 ರ ಸುತ್ತೋಲೆ ಸಂಖ್ಯೆ: ಸಿಆಸುಇ 240 ಸೇನೆನಿ 2022ರಲ್ಲಿ ಸರ್ಕಾರವು 01.11.2022 ರಿಂದ ನೇರ ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲು ಯಾವುದೇ ಕ್ರಮ ತೆಗೆದುಗೊಳ್ಳದಂತೆ ಎಲ್ಲಾ ಇಲಾಖೆಗಳಿಗೆ ಸೂಚನೆ ನೀಡಿದೆ. |

**ಕಡತ ಸಂಖ್ಯೆ: ಲಾ-ಎಲ್ಎಸಿ/142/2022**

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ಮತ್ತು ಶಾಸನ
ರಚನೆ ಹಾಗೂ ಸಣ್ಣ ನೀರಾವರಿ ಸಚಿವರು



Generated from eOffice by Prabhavati M Hiremath, LAW-PS(PRABHA), PRINCIPAL SECRETARY, LAW SEC on 26/12/2022 04:28 PM